159

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಸುರೇಶ್ ತಂದೆ ಬಸಣ್ಣ, ಕೃಷಿ ಅಧಿಕಾರಿ, ಜಂಟಿ ಕೃಷಿ ನಿರ್ದೇಶಕರ ಕಚೇರಿ, ಯಾದಗಿರ, ಇವರ ವಿರುದ್ಧ ದಾಖಲಾದ ಲೋಕಾಯುಕ್ತ ಟ್ರಾಪ ಪ್ರಕರಣದಲ್ಲಿ ಭಾಗಿಯಾದ ಬಗ್ಗೆ ಶಿಸ್ತು ಕ್ರಮ

**ಓದಲಾಗಿದೆ:-**

1) ಹೆಚ್ಚುವರಿ ಪೋಲಿಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರ ಪತ್ರ ಸಂ. ಲೋಕ್/ಐಸ್‌ವಿ(ಜಿ)/ಜಿ-11/ಸಿಆರ್3/2009, ರಾಯಚೂರು .ದಿನಾಂಕ: 09-06-2010
2) ಸರ್ಕಾರದ ಆದೇಶ ಸಂಖ್ಯೆ: ಕೃತೋಇ 27 ಕೃಪವಿ 2009, ದಿನಾಂಕ: 09-06-2009
3) ಸರ್ಕಾರದ ಆದೇಶ ಸಂಖ್ಯೆ: ಕೃತೋಇ 27 ಕೃಪವಿ 2009, ದಿನಾಂಕ: 18-03-2010.
4) ಅಪರ ನಿಬಂಧಕರು,ವಿಚಾರಣೆಗಳು-6 ಇವರ ಅ.ಸಪ.ಸಂ. ಕಂಪ್ಲೇಟ್/ಉಪಲೋಕ್/ಜಿಎಲ್‌ಬಿ-83/2011/ಎಆರ್‌ಇ-6, ದಿನಾಂಕ: 24-11-2011.

**ಪ್ರಸ್ತಾವನೆ:-**

ಮೇಲೆ ಕ್ರ.ಸಂ.(1)ರಲ್ಲಿ ಓದಲಾದ ಪತ್ರದಲ್ಲಿ ಹೆಚ್ಚುವರಿ ಪೋಲಿಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಇವರು, ದಿನಾಂಕ: 09-06-2010ರಲ್ಲಿ ಶ್ರೀ ಸುರೇಶ್, ಬಿನ್, ಬಸಣ್ಣ, ಹಿಂದಿನ ಕೃಷಿ ಅಧಿಕಾರಿ, ಹಾಗೂ ದಿವಂಗತ ಸುರೇಶ ಅನಂತರಾವ ಜಾಧವ್, ಸಹಾಯಕ ಕೃಷಿ ಅಧಿಕಾರಿ, ಜಂಟಿ ಕೃಷಿ ನಿರ್ದೇಶಕರ ಕಚೇರಿ, ರಾಯಚೂರು, ಇವರು ಫಿರ್ಯಾಧಿದಾರರಾದ ಶ್ರೀ ಕೆ.ಪಿ.ಎನ್. ವಿ.ಡಿ. ಪ್ರಸಾದ್, ಬಿನ್, ಕೆ. ಸಾಂಬಶಿವರಾವ್ ರಸಗೊಬ್ಬರ ಮತ್ತು ಕ್ರಿಮಿನಾಶಕ ವ್ಯಾಪಾರಿ, ವೆಂಕಟೇಶ್ವರ ನಗರ, ಸಿಂಧನೂರು, ಇವರಿಗೆ ಕ್ರಿಮಿನಾಶಕ ಅಂಗಡಿ ಪರವಾನಿಗೆ ನೀಡಲು ಅವರಿಂದ ಅಕ್ರಮ ಸಂಭಾವನೆ ಸ್ವೀಕರಿಸುತ್ತಿರುವಾಗ ಸಿಕ್ಕಿ ಬಿದ್ದ ಪ್ರಯುಕ್ತ, ಅವರನ್ನು ಸೇವೆಯಿಂದ ಅಮಾನತ್ತಿನಲ್ಲಿರಿಸುವಂತೆ ಕೋರಿದ್ದರ ಮೇರೆಗೆ, ಸರ್ಕಾರವು ಅವರ ವಿರುದ್ಧ ಲೋಕಾಯುಕ್ತ ಪ್ರಕರಣವನ್ನು ಬಾಕಿ ಇರಿಸಿ,ಶ್ರೀ ಸುರೇಶ ತಂದೆ ಬಸಣ್ಣ, ಕೃಷಿ ಅಧಿಕಾರಿ, ಇವರನ್ನು ಉಲ್ಲೇಖ-2ರ ಆದೇಶದಲ್ಲಿ ಸೇವೆಯಿಂದ ಅಮಾನತ್ತಿನಲ್ಲಿರಿಸಿದೆ. ನಂತರ ಉಲ್ಲೇಖ-3 ರ ಸರ್ಕಾರದ ಆದೇಶದಲ್ಲಿ ಅವರನ್ನು ಅವರ ಮೇಲಿನ ಲೋಕಾಯುಕ್ತ ಪ್ರಕರಣವನ್ನು ಬಾಕಿಯಿರಿಸಿ, ಸೇವೆಗೆ ಪುನರ್ ಸ್ಥಾಪಿಸಿ, ಅವರನ್ನು ಜಂಟಿ ಕೃಷಿ ನಿರ್ದೇಶಕರ ಕಚೇರಿ ಯಾದಗಿರ, ಇಲ್ಲಿಗೆ ನೇಮಿಸಿ ಆದೇಶ ಹೊರಡಿಸಲಾಗಿದೆ.

ಮೇಲೆ ಓದಲಾದ ಕ್ರ.ಸಂ.(4)ರ ದಿನಾಂಕ: 24-11-2011ರ ಪತ್ರದಲ್ಲಿ ಅಪರ ನಿಬಂಧಕರು, ವಿಚಾರಣೆಗಳು-6, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಈ ಪ್ರಕರಣದಲ್ಲಿ ಫಿರ್ಯಾಧಿದಾರರಾದ ಶ್ರೀ ಕೆ.ಪಿ.ಎನ್.ವಿ.ಡಿ. ಪ್ರಸಾದ್, ಬಿನ್, ಕೆ. ಸಾಂಬಶಿವರಾವ್, ರಸಗೊಬ್ಬರ ಮತ್ತು ಕ್ರಿಮಿನಾಶಕ ವ್ಯಾಪಾರಿ, ವೆಂಕಟೇಶ್ವರ ನಗರ, ಸಿಂಧನೂರು, ರಾಯಚೂರು ಜಿಲ್ಲೆ ಇವರಿಂದ ಶ್ರೀ ಸುರೇಶ್ ಬಿನ್ ಬಸಣ್ಣ, ಹಿಂದಿನ ಕೃಷಿ ಅಧಿಕಾರಿ, ಜಂಟಿ ಕೃಷಿ ನಿರ್ದೇಶಕರ ಕಚೇರಿ,

--2--

(4)

ರಾಯಚೂರು ಇವರು, ಫಿರ್ಯಾಧಿದಾರರ ಅಂಗಡಿ ಪರವಾನಿಗೆಯನ್ನು ನವೀಕರಿಸುವ ಸಲುವಾಗಿ ರೂ. 5900/-ಗಳ ಅಕ್ರಮ ಸಂಭಾವನೆ ಪಡೆಯುತ್ತಿರುವಾಗ ರಾಯಚೂರು ಲೋಕಾಯುಕ್ತ ಪೋಲಿಸ ಅಧಿಕಾರಿಗಳಿಗೆ ಸಿಕ್ಕಿಬಿದ್ದಿರುವುದರಿಂದ ಅವರ ವಿರುದ್ಧ ಲಂಚ ನಿರೋಧಕ ಕಾಯ್ದೆ, 1988ರ ಕಲಂ 7,13(1)(ಡಿ) ಜೊತೆಗೆ 13(2) ರ ಪ್ರಕಾರ ಲೋಕಾಯುಕ್ತ ಪೋಲಿಸ ಠಾಣೆ ಗುನ್ನೆ ಸಂ. 3/2009ರಲ್ಲಿ ದಾಖಲಾಗಿದ್ದು, ಸದರಿ ಪ್ರಕರಣದಲ್ಲ ತನಿಖೆ ಮುಗಿದಿದ್ದು, ಪ್ರಕರಣ ಇನ್ನೂ ವಿಚಾರಣೆಗೆ ಬಾಕಿ ಇರುತ್ತದೆ.

ಶ್ರೀ ಸುರೇಶ ಬಿನ್ ಬಸಣ್ಣ, ಕೃಷಿ ಅಧಿಕಾರಿ, ಇವರು ಸರ್ಕಾರಿ ನೌಕರರಾಗಿದ್ದು, ಸಾರ್ವಜನಿಕರ ಕೆಲಸ ಮಾಡಲು, ಅಕ್ರಮವಾಗಿ ಸಂಭಾವನೆ ತೆಗೆದುಕೊಳ್ಳುವಾಗ ಸಿಕ್ಕಿಬಿದ್ದಿದ್ದು, ಇವರು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದರಿಂದ, ಇವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಉದ್ದೇಶಿಸಿ, ಆರೋಪಿತ ಅಧಿಕಾರಿಯವರಿಗೆ ಲೋಕಾಯುಕ್ತ ಕಚೇರಿಯಿಂದ ಅಬ್ಸರವೇಶನ್ ನೋಟ್ ಜಾರಿ ಮಾಡಲಾಗಿದ್ದು, ಅದಕ್ಕೆ ಅವರು ನೀಡಿದ ಹೇಳಿಕೆ ತೃಪ್ತಿಕರವಾಗದಿರುವುದರಿಂದ ಸದರಿಯವರನ್ನು ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ.) ನಿಯಮಾವಳಿ 1957ರಡಿ ಶಿಸ್ತು ಕ್ರಮ ಜರುಗಿಸಲು ಪ್ರಕರಣವನ್ನು ಅದೇ ನಿಯಮಾವಳಿ ನಿಯಮ 14(ಎ) ರನ್ವಯ ತಮಗೆ ಒಪ್ಪಿಸುವಂತೆ ಕೋರಿರುತ್ತಾರೆ. ಸದರಿ ಪ್ರಕರಣದಲ್ಲಿಯ ಇನ್ನೊಬ್ಬ ಆರೋಪಿತ ಅದಿಕಾರಿಯವರಾದ ಶ್ರೀ ಸುರೇಶ ಅನಂತರಾವ ಜಾಧವ ಇವರು ದಿವಂಗತರಾಗಿರುತ್ತಾರೆ.

ಮಾನ್ಯ ಉಪಲೋಕಾಯುಕ್ತ ಕರ್ನಾಟಕರವರ ಕೋರಿಕೆಯಂತೆ, ಶ್ರೀ ಸುರೇಶ ಬಿನ್ ಬಸಣ್ಣ, ಕೃಷಿ ಅಧಿಕಾರಿ, ಜಂಟಿ ಕೃಷಿ ನಿರ್ದೇಶಕರ ಕಚೇರಿ, ಯಾದಗಿರ ಇವರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(1)ರ ಪ್ರಕಾರ ತಪ್ಪೆಸಗಿದ್ದಾರೆಂದು ಮೇಲ್ ನೋಟಕ್ಕೆ ((prima-facie) ಕಂಡು ಬಂದಿದ್ದರಿಂದ. ಅವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ಪ್ರಕಾರ ಶಿಸ್ತು ಕ್ರಮ ಕೈಗೊಳ್ಳಲು ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ) ನಿಯಮ 14-ಎ ಪ್ರಕಾರ ಮಾನ್ಯ ಉಪ ಲೋಕಾಯುಕ್ತರವರಿಗೆ ವಹಿಸಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಕೃತೋಇ 27 ಕೃಪವಿ 2009</u>

<u>ಬೆಂಗಳೂರು, ದಿನಾಂಕ: 14-03-2012</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಸುರೇಶ್ ಬಿನ್ ಬಸಣ್ಣ, ಹಿಂದಿನ ಕೃಷಿ ಅಧಿಕಾರಿ, ಜಂಟಿ ಕೃಷಿ ನಿರ್ದೇಶಕರ ಕಚೇರಿ, ರಾಯಚೂರು, ಹಾಲಿ ಜಂಟಿ ಕೃಷಿ ನಿರ್ದೇಶಕರ

157



ಕಚೇರಿ, ಯಾದಗಿರ ,ಯಾದಗಿರ ಜಿಲ್ಲೆ, ಇವರು ಫಿರ್ಯಾಧಿದಾರರಾದ ಶ್ರೀ ಕೆ.ಪಿ.ಎನ್.ವಿ.ಡಿ. ಪ್ರಸಾದ್, ಬಿನ್ ಕೆ. ಸಾಂಬಶಿವರಾವ್, ರಸಗೊಬ್ಬರ ಮತ್ತು ಕ್ರಿಮಿನಾಶಕ ವ್ಯಾಪಾರಿ, ವೆಂಕಟೇಶ್ವರ ನಗರ ಸಿಂಧನೂರು, ರಾಯಚೂರು ಜಿಲ್ಲೆ ಇವರ ಅಂಗಡಿ ಪರವಾನಿಗೆಯನ್ನು ನವೀಕರಿಸುವ ಸಲುವಾಗಿ ರೂ. 5900/-ಗಳ ಅಕ್ರಮ ಸಂಭಾವನೆ ಪಡೆಯುತ್ತಿರುವಾಗ ಸಿಕ್ಕಿ ಬಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಅವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ.) ನಿಯಮಾವಳಿ 1957ರಡಿ ಇಲಾಖಾ ವಿಚಾರಣಾ ಕ್ರಮವನ್ನು ಆಯೋಜಿಸಲು ಅದೇ ನಿಯಮಾವಳಿ ನಿಯಮ 14(ಎ)ರನ್ವಯ ಸದರಿ ಪ್ರಕರಣವನ್ನು ಕರ್ನಾಟಕ ಉಪ-ಲೋಕಾಯುಕ್ತರವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

14/3/12

ಇವರಿಗೆ:-

1) ಮಹಾಲೇಖಪಾಲರು, (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ) ಕರ್ನಾಟಕ, ಬೆಂಗಳೂರು.
2) ಮಾನ್ಯ ಉಪ ಲೋಕಾಯುಕ್ತರು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
4) ಜಂಟಿ ಕೃಷಿ ನಿರ್ದೇಶಕರು, ರಾಯಚೂರು, ರಾಯಚೂರು ಜಿಲ್ಲೆ,
5) ಜಂಟಿ ಕೃಷಿ ನಿರ್ದೇಶಕರು, ಯಾದಗಿರ ,ಯಾದಗಿರ ಜಿಲ್ಲೆ
6) ಸಹಾಯಕ ಕೃಷಿ ನಿರ್ದೇಶಕರು, ಜಂಟಿ ಕೃಷಿ ನಿರ್ದೇಶಕರ ಕಚೇರಿ, ಯಾದಗಿರ
7) ಸಂಬಂಧಪಟ್ಟ ಅಧಿಕಾರಿಯವರಿಗೆ (ಕೃಷಿ ಆಯುಕ್ತರ ಮೂಲಕ)
8) ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
9) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು.
10) ಸರ್ಕಾರದ ಜಂಟಿ ಕಾರ್ಯದರ್ಶಿ, ಕೃಷಿ ಇಲಾಖೆ, ಅವರ ಆಪ್ತ ಸಹಾಯಕರಿಗೆ,
11) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.